**ದಿನಾಂಕಃ 30-08-2022 ರಂದು ಆದ ಮಧ್ಯಂತರ ಅರ್ಜಿ ಸಂಖ್ಯೆ.5 ಮತ್ತು 6 ರ ಆದೇಶಗಳ ಮೇರೆಗೆ ಪಾಟೀ ಸವಾಲಿಗೋಸ್ಕರ ಸಾಕ್ಷಿಯನ್ನು ಮರಳಿ ಕರೆಯಲಾಗಿದೆ .**

**ದಿನಾಂಕಃ 20-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲು: 6 ನೇ ಎದುರುದಾರರ ಪರ ಶ್ರೀ ಎ.ಎಂ.ಎನ್ ವಕೀಲರಿಂದಃ**

ಇದೇ ನ್ಯಾಯಾಲಯದ ಓ.ಎಸ್ ನಂ.104/2016 ರ ದಾವೆಯಲ್ಲಿ ನಾನು ಎಷ್ಟನೇ ಪ್ರತಿವಾದಿ ಆಗಿದ್ದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ 4, 5, 7 ಮತ್ತು 8 ನೇ ಪ್ರತಿವಾದಿಗಳು ಸೇರಿಕೊಂಡು ಶ್ರೀ.ಐ.ಪಿ.ಕುಳೇನೂರು ವಕೀಲರನ್ನು ನೇಮಿಸಿ ಕೊಂಡಿದ್ದೇವೆ ಎಂದರೆ ಸರಿ. ಸದರಿ ದಾವೆಯ 9 ನೇ ಪ್ರತಿವಾದಿಯಾದ ಚಂದ್ರಪ್ಪ ಏಕಪಕ್ಷೀಯವಾಗಿದ್ದರು ಎಂದರೆ ಸರಿ. ಸದರಿ ಸದರಿ ದಾವೆಯ 9 ನೇ ಪ್ರತಿವಾದಿಯಾದ ಚಂದ್ರಪ್ಪ ರವರಿಗೆ ದಿಃ 22-10-2016 ರಂದು ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿತ್ತು ಎನ್ನುವುದು ನನಗೆ ನೆನಪಿಲ್ಲ. ದಿಃ 24-10-2016 ರಂದು ನ್ಯಾಯಾಲಯ ಸದರಿ 9 ನೇ ಪ್ರತಿವಾದಿಯನ್ನು ಕೂಗಿ ಕರೆದು , ಗೈರು ಹಾಜರು ಆಗಿದ್ದಾರೆ ಎನ್ನುವ ಕಾರಣಕ್ಕಾಗಿ ಏಕಪಕ್ಷೀಯವಾಗಿ ತೆಗೆದು ಕೊಂಡಿತ್ತು ಎನ್ನುವುದು

ನೆನಪಿಲ್ಲ. ಸದರಿ ಓ.ಎಸ್ ನಂ.104/2016 ರ ದಾವೆಯಲ್ಲಿ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ .ಪಿ.ಆರ್.ಕುಪ್ಪೆಲೂರು ವಕೀಲರು ಹಾಜರು ಆಗಿದ್ದರು ಎಂದರೆ ಸರಿ. ಸದರಿ ಓ.ಎಸ್ ನಂ.104/2016 ರ ದಾವೆಯ ದಾವಾ ಸ್ವತ್ತು ವಿ.ಪಿ.ಸಿ ನಂ.337 ಮತ್ತು ವಿ.ಪಿ.ಸಿ ನಂ.338 ಆಗಿದ್ದವು . ಸದರಿ ಓ.ಎಸ್ ನಂ.104/2016 ರ ವಾದಿ ರಾಜು ರವರು ಸದರಿ ದಾವೆಯ 6 ನೇ ಪ್ರತಿವಾಯಾದ ಇಂಡಿಯನ್ ಬ್ಯಾಂಕ್ ನವರು ಹರಾಜು ಮಾಡಿದ ವಿ.ಪಿ.ಸಿ ನಂ.337 ಮತ್ತು ವಿ.ಪಿ.ಸಿ ನಂ.338 ರ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ . ಸದರಿ ಓ.ಎಸ್ ನಂ.104/2016 ರ ದಾವೆಯಲ್ಲಿ ನಾನು ನನ್ನ ಯಾವುದೇ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಯಾವುದೇ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇದ್ದರೂ ಸಹ ನನ್ನ ಪರವಾಗಿ ಲಿಖಿತ ಪ್ರತಿವಾದಪತ್ರವನ್ನು ಸಲ್ಲಿಸಿದ್ದೇನೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನ್ಯಾಯಾಲಯ ಎಲ್ಲಾ ಪ್ರತಿವಾದಿಗಳಿಗೆ ತಮ್ಮ ಪರ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಲು ಸಾಕಷ್ಟು ಕಾಲಾವಕಾಶ ನೀಡಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಲಯ ಎಲ್ಲಾ ಪ್ರತಿವಾದಿಗಳಿಗೆ ತಮ್ಮ ಪರ

ಸಾಕ್ಷಿ ವಿಚಾರಣೆಗೊಸ್ಕರ ಸಾಕಷ್ಟು ಕಾಲಾವಕಾಶವನ್ನೂ ಸಹ ನೀಡಿತ್ತು ಎಂದರೆ ಸರಿಯಲ್ಲ. ಸದರಿ ದಾವೆಯ 4, 5, 7 ಮತ್ತು 8 ನೇ ಪ್ರತಿವಾದಿಗಳಿಗೆ ನ್ಯಾಯಾಲಯ ತಮ್ಮ ಪರವಾಗಿ ಸಾಕ್ಷಿ ನುಡಿಯಲು ಸಾಕಷ್ಟು ಕಾಲಾವಕಾಶ ನೀಡಿತ್ತು ಎಂದರೆ ಸರಿಯಲ್ಲ. ನ್ಯಾಯಾಲಯ ಸದರಿ ದಾವೆಯಲ್ಲಿ ಸದರಿ 4, 5, 7 ಮತ್ತು 8 ನೇ ಪ್ರತಿವಾದಿಗಳಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹ ಮತ್ತು ಸದರಿ ದಾವೆಯಲ್ಲಿ ನಮಗೆ ಯಾವುದೇ ಲಾಭ ಇಲ್ಲ ಎನ್ನುವ ಕಾರಣಕ್ಕಾಗಿ ನಾವು ಯಾವುದೇ ಸಾಕ್ಷಿಯನ್ನು ನುಡಿದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯ ದಾವಾ ಸ್ವತ್ತುಗಳಾದ ವಿ.ಪಿ.ಸಿ ನಂ.337 ಮತ್ತು ವಿ.ಪಿ.ಸಿ ನಂ.338 ರ ಆಸ್ತಿಗಳು ಸದರಿ ದಾವೆಯ 1 ನೇ ಪ್ರತಿವಾದಿಯ ದುಂಡಿ ಬಸಪ್ಪ ರವರ ಆಸ್ತಿಗಳು ಆಗಿದ್ದವು ಎಂದರೆ ಸರಿ. ನ್ಯಾಯಾಲಯ ನಮಗೆ ಯಾವುದೇ ಕಾಲಾವಕಾಶ ನೀಡದೇ ಸದರಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಪು ನೀಡಿದೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯ ತೀರ್ಪಿನ ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಬೇಕು ಎನ್ನುವ ನನ್ನ ವೈಯಕ್ತಿಕ ಅಭಿಪ್ರಾಯದ

ಮೇರೆಗೆ ನಾನು ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡಕ್ಕೆ ಹೋಗಿದ್ದೆ . ಸದರಿ ದಾವೆಯ ತೀರ್ಪಿನ ನಂತರ ಮತ್ತು ನಾನು ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡಕ್ಕೆ ಭೇಟಿ ನೀಡಿದ ನಂತರ ನಾನು ರಾಣೇಬೆನ್ನೂರಿನ ಶ್ರೀ ಕೆ.ಎನ್.ದೇಶಪಾಂಡೆ ವಕೀಲರ ಮುಖಾಂತರ ಈ ಪ್ರಸ್ತುತ Civil Miscellaneous ಅರ್ಜಿಯನ್ನು ಸಲ್ಲಿಸಿದ್ದೇನೆ. ಸದರಿ ಓ.ಎಸ್ ನಂ.104/2016 ರ ತೀರ್ಪಿನ ವಿರುದ್ದ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು 80 ಸಾವಿರದ 325 ರೂಪಾಯಿಗಳು ನ್ಯಾಯಾಲದ ಶುಲ್ಕ ಮತ್ತು ವಕೀಲರ ಫೀಜ್ ಗೊಸ್ಕರ ಹಣ ಖರ್ಚು ಆಗುತ್ತೆ ಎನ್ನುವ ವಿಷಯವನ್ನು ನಾನು ಮಧ್ಯಂತರ ಅರ್ಜಿ ಸಂಖ್ಯೆ .1 ರ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೆನೋ ಅಥವಾ ಇಲ್ಲ ಎನ್ನುವುದು ನನಗೆ ಈಗ ನೆನಪಿಲ್ಲ. ಸದರಿ ಹಣವನ್ನು ಒಟ್ಟುಗೂಡಿಸಲು ನಾನು ಅಕ್ಟೋಬರ ತಿಂಗಳದವರೆಗೆ ಹಣ ಸಂಗ್ರಹಣೆ ಮಾಡಿದ್ದೇನೆ ಮತ್ತು ಸದರಿ ಮೊತ್ತದ ಬಗ್ಗೆ ನನಗೆ ಯಾವ ವಕೀಲರು ತಿಳಿಸಿದ್ದಾರೆ ಎನ್ನುವುದನ್ನು ನಾನು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ ಮಾನ್ಯ ಉಚ್ಛ ನ್ಯಾಯಾಲಯದ ವಕೀಲರು ನನಗೆ ಇದೇ

ನ್ಯಾಯಾಲಯದಲ್ಲಿ Civil Miscellaneous ಅರ್ಜಿಯನ್ನು ಸಲ್ಲಿಸಲು ಸಲಹೆ ನೀಡಿದ್ದರ ಮೇರೆಗೆ ನಾನು ಶ್ರೀ.ಕೆ.ಎನ್.ದೇಶಪಾಂಡೆ ವಕೀಲರ ಮುಖಾಂತರ ಈ ಅರ್ಜಿಯನ್ನು ಸಲ್ಲಿಸಿದ್ದೇನೆ . ಈ ಪ್ರಸ್ತುತ Civil Miscellaneous ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ನನ್ನ ವಕೀಲರು ನನಗೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸುವ ಅವಶ್ಯಕತೆ ಇರಲಿಲ್ಲ ಮತ್ತು ಸದರಿ 80 ಸಾವಿರ ರೂಪಾಯಿ ಹಣ ಜೋಡಿಸುವ ತ್ರಾಸ್ ಏಕೆ ತೆಗೆದು ಕೊಂಡಿರುತ್ತೀರಿ ಎಂದು ವಿಚಾರಿಸಿರುವುದಿಲ್ಲ. ಸದರಿ ಓ.ಎಸ್ ನಂ.104/2016 ರ ತೀರ್ಪಿನ ನಂತರ ನಾನು ಮೇಲ್ಮನವಿಯನ್ನು ಸಲ್ಲಿಸುವ ಸಲುವಾಗಿ ಸದರಿ 80 ಸಾವಿರ ರೂಪಾಯಿ ಹಣ ಸಂಗ್ರಹಣೆ ಮಾಡಿರುವುದಿಲ್ಲ ಮತ್ತು ಮಾನ್ಯ ಉಚ್ಚ ನ್ಯಾಯಾಲಯಕ್ಕೂ ಸಹ ಭೇಟಿ ನೀಡಿರುವುದಿಲ್ಲ ಹಾಗು ಯಾವುದೇ ವಕೀಲರನ್ನೂ ಸಹ ಭೇಟಿ ಆಗಿರುವುದಿಲ್ಲ ಆದರೂ ಸಹ ಸದರಿ ವಿಷಯಗಳನ್ನು ನನ್ನ ಪ್ರಮಾಣ ಪತ್ರಗಳಲ್ಲಿ ಸುಳ್ಳಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

ಸದರಿ ಓ.ಎಸ್ ನಂ.104/2016 ರ ದಾವೆಯ ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿಗಳು ಇರಲಿಲ್ಲ ಎನ್ನುವ

ಕಾರಣಕ್ಕಾಗಿ ನಾವು ಸದರಿ ದಾವೆಯಲ್ಲಿ ಯಾವುದೇ ಆಸಕ್ತಿಯನ್ನು ವಹಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿಗಳು ಇಲ್ಲದೇ ಇದ್ದರೂ ಸಹ ದುರುದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಸ್ತುತ ಅರ್ಜಿಯನ್ನು ಸಲ್ಲಿಸಲು ಆಗಿರುವ ಕಾಲ ವಿಳಂಬವನ್ನು ನ್ಯಾಯಾಲಯ ಮನ್ನಿಸಲಿ ಎನ್ನುವ ಕಾರಣಕ್ಕಾಗಿ ನಾವು ಸುಳ್ಳು ಮಾಹಿತಿಗಳನ್ನು ನಮೂದಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಓ.ಎಸ್ ನಂ.104/2016 ರ ದಾವೆಯನ್ನು ನ್ಯಾಯಾಲಯ ಕಾನೂನುಬದ್ಧವಾಗಿ ಇತ್ಯರ್ಥ ಪಡಿಸಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
*ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.*